<u>ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ ಎಮ್ ಎಫ್ ಸಿ , ಕುಂದಗೋಳ</u>

ಓ ಎಸ್ ನಂಬರ **11/2019** ಡಿ ಡಬ್ಲ್ಯೂ **4**

ಸಾಕ್ಷಿಯ ಹೆಸರು ಃ ಮಲ್ಲಪ್ಪ ಹಳ್ಳಿ

ತಂದೆಯ ಹೆಸರು ಃ ಕರಿಯಪ್ಪ

ವಯಸ್ಸು ಃ 65 ವರ್ಷ

ಉದ್ಯೋಗ ಃ ಒಕ್ಕಲುತನ.

ವಾಸಸ್ಥಳ ಃ ಭರಧ್ವಾಡ.

ದಿನಾಂಕಃ 19/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಸಿ ಎಮ್ ಕೆ ವಕೀಲರಿಂದ ಃ</u>

1. ನಮ್ಮ ಗ್ರಾಮದ ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ನನಗೆ ಗೊತ್ತು. ಸದರಿಯವರ ಅಣ್ಣ ಸಿದ್ಧಲಿಂಗಪ್ಪನ ಪರಿಚಯವಿದೆ. ಸದರಿ ಚನ್ನಪ್ಪ ತೀರಿಕೊಂಡಿದ್ದಾರೆ. ಎಷ್ಟು ವರ್ಷ ಆಗಿದೆ ಎಂದು ನನಗೆ ನೆನಪಿಲ್ಲ. ಸಿದ್ಧಲಿಂಗಪ್ಪ ತೀರಿಕೊಂಡಿದ್ದಾರೆ. ಎಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಸಂಗಪ್ಪ ಗೊತ್ತು. ವಾದಿಯರ ಪರಿಚಯವಿದೆ. ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ಅವರು ಮಾಡಿದ ಕಾಗದ ಪತ್ರಕ್ಕೆ ಸಹಿ ಹಾಕಿದ್ದೀರಾ ಎಂದರೆ ಸಾಕ್ಷಿ ಜಮೀನು ಅಳತೆ ಮಾಡುವ ಸಂಬಂಧ ಸಹಿ ಹಾಕಲು ಹೇಳಿದ ಕಾರಣ ಮಾಡಿದ್ದೇನೆ. ಅಳತೆ ಮಾಡುವ ಸಾಹೇಬರು 8-10 ವರ್ಷಗಳ ಹಿಂದೆ ಹೊಲದಲ್ಲಿ ಸಹಿ ಪಡೆದಿರುತ್ತಾರೆ. ಸಾಕ್ಷಿ ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಡಿ. 3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಡಿ. 3 ಎ ಎಂದು ಗುರುತಿಸಲಾಯಿತು. ನಾನು ಶಾಲೆಯನ್ನು 10 ನೇ ತರಗತಿಯವರೆಗೆ ಓದಿದ್ದೇನೆ. ಕೇಳಿ ತಿಳಿದುಕೊಂಡು ದಾಖಲೆಗಳಲ್ಲಿ ನಾನು ಸಹಿ ಮಾಡುತ್ತೇನೆ. ನಿಡಿ. 3 ಕ್ಕೆ ಕೇಳಿ ತಿಳಿದುಕೊಂಡು ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿಸಿಕೊಂಡಿದ್ದಾರೆ ಏನು ಬರೆದಿರಲಿಲ್ಲ. ಬೇರೆ ಯಾರಾದರ ಸಹಿ ಇತ್ತಾ ಎಂದರೆ ಇಲ್ಲ. ಮೋಜನಿ ಮಾಡುವ ಸಲುವಾಗಿ ಬಿಳಿ ಹಾಳೆಯ ಮೇಲೆ ಸಹಿ ಮಾಡು ಎಂದು ಹೇಳಿದರು ಆ ಕಾರಣದಿಂದ ಮಾಡಿರುತ್ತೇನೆ. ನಿಡಿ. 3 ಕಾಗದ ಬಿಳಿ ಹಾಳೆ ಅಲ್ಲ. ಹಸಿರು ಹಾಳೆ ಎಂದರೆ ಸಾಕ್ಷಿ ಬಿಳಿ ಹಾಳೆ ಕಂಡಂತೆ ಆಯಿತು ಎಂದು ನುಡಿಯುತ್ತಾರೆ. ದಿಃ 29-08-2013 ರಂದು ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ಅವರು ಬರೆದು ಕೊಟ್ಟ ಮೃತ್ಯು ಪತ್ರಕ್ಕೆ ಆತನ ಸಮಕ್ಷಮ ಸಹಿ

ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಕುಂದಗೋಳದ ಎಸ್ ಜಿ ಘಡೋಸಿ ದಸ್ತು ಬರಹಗಾರರ ಕಚೇರಿಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ. 3 ರ ಉಳಿಕೆ ಸಹಿ ಯಾರದ್ದು ಎಂದು ಗುರುತಿಸಲಾಗುತ್ತದೆಯಾ ಎಂದರೆ ಇಲ್ಲ. ಚನ್ನಪ್ಪ ಸಹಿ ಮಾಡಿದ್ದನ್ನು ನೋಡಿ ನಿಡಿ. 3 ಕ್ಕೆ ನಾನು ಸಾಕ್ಷಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಾಕ್ಷಿ ನುಡಿಯುವಂತೆ ನಿಮಗೆ ಸಮನ್ಸ ಬಂದಿತ್ತಾ ಎಂದರೆ ಬಂದಿತ್ತು. ನಾನು ಇರಲಿಲ್ಲ. ನಾನು ದವಾಖಾನೆಯಲ್ಲಿದೆ. ನ್ಯಾಯಾಲಯದಿಂದ ವಾರೆಂಟ್ ಬಂದಿತ್ತು ಎಂದರೆ ಸಾಕ್ಷಿ ನಿನ್ನೆ ಬಂದಿತ್ತು. ಆದರೆ ನಾನು ಊರಿನಲ್ಲಿರಲಿಲ್ಲ. ಇದಕ್ಕಿಂತ ಮೊದಲು ವಾರೆಂಟ್ ಬಂದಿತ್ತಾ ಎಂದರ ನನಗೆ ಗೊತ್ತಿಲ್ಲ. ನಾನು ವಾದಿಯರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನಿಜಗುಣಪ್ಪ ತಂದೆ ಶಿವಪ್ಪ ಅಮ್ಮಿನಭಾವಿ ಎಂಬುವ ವ್ಯಕ್ತಿ ವಾರೆಂಟ್ ಬಂದಿತ್ತು, ಇಂದು ಮುದ್ಧತ್ತಿದೆ ಎಂದು ಹೇಳಿದ್ದರಿಂದ ನ್ಯಾಯಾಲಯಕ್ಕೆ ಬಂದಿದ್ದೇನೆ. ಚನ್ನಪ್ಪನ ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದರು, ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ಹೊಲ ಅಳೆಯುವ ಅಧಿಕಾರಿ ಕಾಗದ ಪತ್ರಕ್ಕೆ ಸಹಿ ಪಡೆದಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ವಾದಿ ಪರ ವಕೀಲರಿಂದ ಃ ಇಲ್ಲ.</u>

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ